
'ಗುರು ಶಿಷ್ಯರು' ಚಿತ್ರದ ನಟ ಶರಣ್ ಮತ್ತು ನಟಿ ನಿಶ್ವಿಕಾ ನಾಯ್ಡು


ಜಯರಾಜ್ ಆಗಿ 'ಹೆಡ್ ಬುಷ್'ನಲ್ಲಿ ಧನಂಜಯ

ಕುಟುಂಬವೊಂದರ ಮೂವರು ಕಲಾವಿದರು ಕಾಣಿಸಿಕೊಂಡ ಅಪರೂಪದ ದಾಖಲೆಗೆ 'ಗಂಧದಗುಡಿ' ಪಾತ್ರವಾಯಿತು.

'ಗಂಧದಗುಡಿ' ಸಿನಿಮಾಕ್ಕೆ ಪುನೀತ್‌ರ ಸಾವಿನ ಭಾವುಕ ಆವರಣ ಇರುವಂತೆಯೇ, ಸಾಂಸ್ಕೃತಿಕ, ಸಾಮಾಜಿಕ ಮಹತ್ವವೂ ಇದೆ. ಪುನೀತ್‌ರ ಮಹತ್ವಾಕಾಂಕ್ಷೆಯ ಈ ಕೃತಿ, ಅವರ ನಡೆ–ನುಡಿಯನ್ನು ಬಿಂಬಿಸುವಂತೆಯೂ ರೂಪುಗೊಂಡಿದೆ. ಮಕ್ಕಳು, ಮಹಿಳೆಯರು ಮುಗಿಬಿದ್ದು 'ಗಂಧದಗುಡಿ' ಕಣ್ತುಂಬಿಕೊಂಡರು. ಶಾಲಾಮಕ್ಕಳಿಗೆ 'ಗಂಧದಗುಡಿ' ತೋರಿಸುವ ಪ್ರಯತ್ನಗಳು ನಡೆದವು. ಡಾಕ್ಯುಡ್ರಾಮಾವೊಂದು ಸಿನಿಮಾ ರೂಪದಲ್ಲಿಯೇ ತೆರೆಕಂಡು, ದೊಡ್ಡಮಟ್ಟದ ಯಶಸ್ಸನ್ನೂ ಗಳಿಸಿತು. ಕರ್ನಾಟಕದ ವನ್ಯಸಂಪತ್ತಿನ ಬಗ್ಗೆ ಪ್ರೀತಿ–ಹೆಮ್ಮೆ ಮೂಡುವಂತೆ 'ಗಂಧದಗುಡಿ' ರೂಪುಗೊಂಡಿದ್ದನ್ನು ಪರಿಗಣಿಸಿ, ಕರ್ನಾಟಕ ಸರ್ಕಾರ ಸಂಪೂರ್ಣ ತೆರಿಗೆ ವಿನಾಯಿತಿ ನೀಡಿದ್ದು ಚಿತ್ರದ ಯಶಸ್ಸನ್ನು ಮತ್ತಷ್ಟು ಹೆಚ್ಚಿಸಿತು.

'ಬನಾರಸ್' ನವೆಂಬರ್ ತಿಂಗಳಲ್ಲಿ ತೆರೆಕಂಡ ಬಹುನಿರೀಕ್ಷಿತ ಸಿನಿಮಾ. ಕೋವಿಡ್ ಕಾರಣಕ್ಕೆ ಬಿಡುಗಡೆ ಮುಂದಕ್ಕೆ ಹೋಗುತ್ತಲೇ ಬಂದ 'ಬನಾರಸ್' ರಾಜ್ಯೋತ್ಸವ ತಿಂಗಳ ಮೊದಲ ವಾರದಲ್ಲಿಯೇ ತೆರೆಕಂಡಿತು. 'ಒಲವೇ ಮಂದಾರ'ದ ಮೂಲಕ ಭಾರತವನ್ನೇ ಭಿತ್ತಿಯನ್ನಾಗಿಸಿಕೊಂಡು ಪ್ರೇಮಪಯಣ ನಡೆಸಿದ್ದ ನಿರ್ದೇಶಕ ಜಯತೀರ್ಥ, ಕಾಶಿಯನ್ನು ಕೇಂದ್ರವಾಗಿಟ್ಟುಕೊಂಡು ಯುವಮನಸ್ಸುಗಳ ತವಕತಲ್ಲಣಗಳ ಕಥೆ ಹೇಳಲು ಪ್ರಯತ್ನಿಸಿದ್ದರು. ಯುವನಟ ಜೈದ್ ಖಾನ್ ಹಾಗೂ ಸೋನಲ್ ಮೊಂತೆರೊ ಜೋಡಿಯ 'ಬನಾರಸ್' ಪ್ರೇಕ್ಷಕರನ್ನು ಮೋಡಿ ಮಾಡುವಲ್ಲಿ ದೊಡ್ಡ ಯಶಸ್ಸನ್ನೇನೂ ಗಳಿಸಲಿಲ್ಲ.

ನವೆಂಬರ್‌ನಲ್ಲಿ ತೆರೆಕಂಡ ಸಿನಿಮಾಗಳಲ್ಲಿ ಬೇರೆ ಬೇರೆ ಕಾರಣಗಳಿಗಾಗಿ ಗಮನಸೆಳೆದ ಚಿತ್ರಗಳಲ್ಲಿ 'ಕಂಬ್ಳಿಹುಳ', 'ರಾಣಾ' ಹಾಗೂ 'ರೇಮೊ' ಮುಖ್ಯವಾದವು. ಹೊಸಬರೇ ಸೇರಿ ಮಾಡಿದ ನವನ್ ಶ್ರೀನಿವಾಸ್ ನಿರ್ದೇಶನದ 'ಕಂಬ್ಳಿಹುಳ' ಸಿನಿಮಾವು ಭರವಸೆ ಮೂಡಿಸಿತು. ನಂದಕಿಶೋರ್ ನಿರ್ದೇಶನದ 'ರಾಣಾ' ಯುವಜೋಡಿ ಶ್ರೇಯಸ್ ಮಂಜು ಮತ್ತು ರೀಷ್ಮಾ ನಾಣಯ್ಯರಿಗೆ ಹೊಸ ಇಮೇಜ್ ತಂದುಕೊಡಬಹುದೆನ್ನುವ ನಿರೀಕ್ಷೆ ನಿಜವಾಗಲಿಲ್ಲ. ಪವನ್ ಒಡೆಯರ್ ನಿರ್ದೇಶನದ 'ರೇಮೊ' ಚಿತ್ರದಿಂದ ಇಶಾನ್ ಮತ್ತು ಆಶಿಕಾ ರಂಗನಾಥ್‌ರ ಗ್ರಾಫ್ ಮೇಲೇರಲಿಲ್ಲ.

## ಭರವಸೆಯ ಸಾಲುದೀಪಗಳು

ಕ್ರಿಸ್‌ಮಸ್ ಹೊಳಪಿನ ಡಿಸೆಂಬರ್ ತಿಂಗಳು ದೊಡ್ಡ ದೊಡ್ಡ ಸಿನಿಮಾಗಳು ತೆರೆಕಾಣಲು ಹಂಬಲಿಸುವ ಸಮಯ. ಈ ತಿಂಗಳಲ್ಲಿ ತೆರೆಕಂಡ, ಶ್ರೀಧರ್ ಷಣ್ಮುಖ ನಿರ್ದೇಶನದ 'ಧರಣಿಮಂಡಲ ಮಧ್ಯದೊಳಗೆ' ಸಿನಿಮಾದ ಬಗ್ಗೆ ಚಿತ್ರರಸಿಕರು ಒಳ್ಳೆಯ ಮಾತನಾಡುತ್ತಿದ್ದಾರೆ. ಯೋಗರಾಜ ಭಟ್ ನಿರ್ಮಾಣ ಸಂಸ್ಥೆಯ ಸಹಯೋಗದಲ್ಲಿ ರೂಪುಗೊಂಡಿರುವ 'ಪದವಿಪೂರ್ವ' ಸಿನಿಮಾದ ಬಗ್ಗೆ ಗಾಂಧಿನಗರಕ್ಕೆ ನಿರೀಕ್ಷೆಗಳಿವೆ. ನ್ಯೂಯಾರ್ಕ್ ಫಿಲ್ಮ್ ಅಕಾಡೆಮಿಯಲ್ಲಿ ಕಲಿತು ಬಂದಿರುವ ಹರಿಪ್ರಸಾದ್ ಜಯಣ್ಣ ಈ ಚಿತ್ರದ ನಿರ್ದೇಶಕರು. ಶಿವರಾಜ್‌ಕುಮಾರ್ ನಟನೆ, ಹರ್ಷ ನಿರ್ದೇಶನದ 'ವೇದ' ತೆರೆಕಾಣಲು ಸಿದ್ಧವಾಗಿರುವ ಮತ್ತೊಂದು ಮಹತ್ವಾಕಾಂಕ್ಷೆಯ ಸಿನಿಮಾ. ಶಿವರಾಜ್ ನಟನೆಯ 125ನೇ ಸಿನಿಮಾ ಎನ್ನುವುದು 'ವೇದ'ದ ವಿಶೇಷಗಳಲ್ಲೊಂದು. ಈ ಸಿನಿಮಾವು ಡಿ. 23ಕ್ಕೆ ಕನ್ನಡ, ತಮಿಳು ಹಾಗೂ ತೆಲುಗಿನಲ್ಲಿ ತೆರೆಕಾಣಲಿದೆ.

## ಕೊನೆ ಟಿಪ್ಪಣಿ

2022ರ ಕೆಲವೇ ಚಿತ್ರಗಳ ಯಶಸ್ಸು ದೊಡ್ಡದಾಗಿ ಕಾಣಲಿಕ್ಕೆ ಕಾರಣವಿದೆ. ಅದು, ಕೊರೊನೋತ್ತರ ದಿನಗಳಲ್ಲಿ ಪ್ರೇಕ್ಷಕರು ಚಿತ್ರಮಂದಿರಗಳಿಗೆ ಬರುವಂತಾಗಿರುವುದು. ರುಚಿಕರ ಯಶಸ್ಸಿನ ಈ ಸಂದರ್ಭ, ಗುಣಮಟ್ಟದ ಕುರಿತಂತೆ ನಮ್ಮ ಆತ್ಮಾವಲೋಕನಕ್ಕೂ ಕಾರಣವಾಗಬೇಕು.

ಕನ್ನಡ ಚಿತ್ರರಂಗ ಸ್ವಂತಿಕೆಯ ಬಿಕ್ಕಟ್ಟಿನಿಂದ ಬಳಲುತ್ತಿರುವ ದಿನಗಳಿವು. ವ್ಯಾಪಾರ ಮತ್ತು ರಂಜನಾ ಪ್ರಧಾನ ಹಾಗೂ ಪ್ರಯೋಗಶೀಲ ಹಂಬಲ – ಎರಡೂ ಬಗೆಯ ಸಿನಿಮಾಗಳಲ್ಲಿ 'ಕನ್ನಡದ ಸೊಗಡು' ವರ್ಷದಿಂದ ವರ್ಷಕ್ಕೆ ಕ್ಷೀಣಿಸುತ್ತಲೇ ಇದೆ. 'ಕಾಂತಾರ'ದಂಥ ವಿರಳ ಉದಾಹರಣೆಗಳನ್ನು ಹೊರತುಪಡಿಸಿದರೆ, 'ಪ್ಯಾನ್ ಇಂಡಿಯಾ'ದ ಹೊಸ ಸೂತ್ರ ಪ್ರಾದೇಶಿಕತೆಗೆ ಎದುರಾಗಿರುವ ಬಹು ದೊಡ್ಡ ಆತಂಕದಂತೆ ಕಾಣಿಸುತ್ತದೆ. ಈ ಆತಂಕವನ್ನು ದಾಟಬೇಕಾದ ಸವಾಲನ್ನು ಯುವ ಸಿನಿಮಾ ನಿರ್ಮಾತೃಗಳು ಎದುರಿಸಲೇಬೇಕಾಗಿದೆ. ತಮಿಳು, ಮರಾಠಿ, ಮಲಯಾಳಂ ಚಿತ್ರರಂಗಗಳು ಪ್ರಾದೇಶಿಕ ನೆಲೆಗಟ್ಟಿನಲ್ಲೇ ನಡೆಸುತ್ತಿರುವ ಪ್ರಯೋಗಗಳು ದೇಶದ ಗಮನಸೆಳೆಯುತ್ತಿರುವುದು ಕನ್ನಡ ಚಿತ್ರೋದ್ಯಮಕ್ಕೆ ಪ್ರೇರಣೆಯಾಗಬೇಕಾಗಿದೆ.

ಪ್ರತಿಕ್ರಿಯಿಸಿ: feedback@sudha.co.in